# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

*ಎಸ್‌ಸಿ.* 160/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ರಾಜು | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ರಾಮ್ ಗೋಪಾಲಶೆಟ್ಟಿ | | **08.10.2024** |
| **ವಯಸ್ಸು** | ಃ **36** **ವರ್ಷ** | | |
| **ವೃತ್ತಿ** | ಃ ವ್ಯವಸಾಯ | **ಪ್ರಾ.ಸಾ.** | ಃ **08** |
| **ವಾಸಸ್ಥಳ** | ಃ ಹೆಮ್ಮರಗಾಲ | **ಚಾ.ಸಾ.** | ಃ **14** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಈಗ ಅಂದಾಜು *1 ½* ವರ್ಷದ ಹಿಂದೆ ನಮ್ಮ ಗ್ರಾಮದ ಸಿದ್ದರಾಜು ಇವರ ಮಗ ಮಹೇಶ ಮರಣಹೊಂದಿದಾಗ ನೋಡಲು ಹೋಗಿದ್ದೆ. ಆ ಕಾಲಕ್ಕೆ ಮಹೇಶನ ಶವವನ್ನು ನೋಡಿದ್ದೆ. ಆದರೆ ಮಹೇಶ ಯಾವ ಕಾರಣಕ್ಕೆ ಮತ್ತು ಹೇಗೆ ಮರಣಹೊಂದಿದ್ದ ಎಂದು ನನಗೆ ಗೊತ್ತಿಲ್ಲ. ನಾನು ಶವ ದೊರೆತ ಸ್ಥಳದ ಅಕ್ಕಪಕ್ಕದಲ್ಲಿ ನೋಡಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ದಿಃ*03.01.2022* ರಂದು ಬೆಳಗ್ಗೆ *9* ಗಂಟೆಗೆ ಜನ ಸೇರಿದ್ದನ್ನು ನೋಡಿ ನಾನು ಆ ಸ್ಥಳಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಈ ಪ್ರಕರಣದ ಆರೋಪಿತರು ಮಹೇಶನನ್ನು

ಅಪಹರಿಸಿ ನಂತರ ಆರೋಪಿತರು ಮಾಟ ಮಂತ್ರ ಮಾಡಿಸಿ ಮೃತ ಮಹೇಶನನ್ನು ಕೊಲೆ ಮಾಡಿಸಿದ್ದರು ಎಂದು ಗೊತ್ತಾಗಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ದಿಃ*03.01.2022* ರಂದು ಬೆಳಗ್ಗೆ ------------ ತಿಳಿಯಬಯಸುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*10(ಡಿ)* ಎಂದು ಗುರುತಿಸಿದೆ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ- ಇಲ್ಲ**

***ಮರು ವಿಚಾರಣೆಃ- ಇಲ್ಲ.***

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು